# ಅರ್ಹದ್ದಾಸನ ರಟ್ಟಮತ : ಒಂದು ಅವಲೋಕನ

**ಡಾ.ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಧ್ಯಯುಗದ ಸಂದರ್ಭದಲ್ಲಿ ಅರ್ಹದ್ದಾಸ ಎಂಬ ಕವಿ ಆಗಿ ಹೋಗಿದ್ದಾನೆ. ಈತ ಉಳಿದೆಲ್ಲ ಹಿಂದಣ ಕವಿಗಳಂತೆ ರಾಜ ಮಹಾರಾಜರ ದೇವತೆಗಳ ಕುರಿತು ಕೃತಿಯನ್ನು ಬರೆಯದೆ ವಿಶೇಷವಾಗಿ ಸರ್ವಜೀವಗಳಿಗೆ ಉಪಕಾರಿಯಾಗಬಲ್ಲ ಅತ್ಯವಶಕ ಜಲಸಂಪನ್ಮೂಲದ ಕುರಿತು ಅಂದರೆ ಜಲಶಾಸ್ತ್ರದ ಕುರಿತು ಕೃತಿಯನ್ನು ಬರೆದಿದ್ದಾನೆ. ಈತನ ಕೃತಿಯ ತುಂಬ ಸಂಪೂರ್ಣ ಜಲಮೂಲಗಳ ಕುರಿತ ಚರ್ಚೆ ಇದೆ. ಅದನ್ನು 'ವೃಷ್ಟಿಶಾಸ್ತ್ರ' ಅಂತಲೂ ಕರೆದಿದ್ದಾನೆ. 'ವೃಷ್ಟಿ' ಎಂದರೆ ಮಳೆ. ಮಳೆಯ ಕುರಿತಾದ ವಿವರಗಳನ್ನು ತಿಳಿಸುವ ಶಾಸ್ತ್ರವೇ ವೃಷ್ಟಿಶಾಸ್ತ್ರ ಅಥವಾ ಜಲಶಾಸ್ತ್ರ. ಭೂಮಿಯ ಮೇಲೆ ಮಳೆಯಾಗಿ ಸುರಿದ ನೀರು ಹಳ್ಳ-ಕೊಳ್ಳ, ಕೆರೆ-ಭಾವಿ, ಹೊಳೆಗಳಲ್ಲಿ ಸಂಗ್ರಹವಾಗುತ್ತದೆ. ಭೂಮಿಯ ಆಳಕ್ಕೆ ಸೇರಿ ಅಂತರ್ಜಲದ ರೂಪ ಪಡೆಯುತ್ತದೆ. ಅದರಲ್ಲಿನ ಒಂದಿಷ್ಟು ಭಾಗ ಆವಿಯಾಗಿ ಆಕಾಶವನ್ನು ಸೇರುತ್ತದೆ. ನದಿಗಳಿಂದ ಹರಿದು ಸಾಗುವ ಒಂದಿಷ್ಟು ನೀರು ಸಮುದ್ರ ಸಾಗರವನ್ನು ಸೇರುತ್ತದೆ. ಹೀಗೆ ಮಳೆಯ ಮೂಲಕ ಸುರಿಯುವ ನೀರು, ಭೂಮಿಯ ಮೇಲಿರುವ ಪ್ರತಿಯೊಂದು ಜೀವಕ್ಕೂ ಜೀವನಾಧಾರ. ಅದಕ್ಕಾಗಿ ನೀರನ್ನು 'ಜೀವ ಜಲ' ಎಂದು ಕರೆಯಲಾಗುತ್ತದೆ. ಪೃಥ್ವಿಯ ಒಟ್ಟು ಮೂರು ಭಾಗ ನೀರು ಇದ್ದರೆ, ಒಂದು ಭಾಗ ಮಾತ್ರ ಭೂಮಿ ಇದೆ ಎಂದು ಆಧುನಿಕ ವಿಜ್ಞಾನ ಅಂದಾಜಿಸಿದೆ. ಇಷ್ಟೆಲ್ಲ ಜಲಮೂಲಗಳಿದ್ದರೂ ಎಷ್ಟೋ ಬಾರಿ ನಾವು ಬರಗಾಲವನ್ನು ಅನುಭವಿಸಬೇಕಾಗುತ್ತದೆ. ಭೂಮಿಯ ಮೇಲಿನ ಭಾಗ ನೀರಿದ್ದರೂ ಕುಡಿಯಲು ಯೋಗ್ಯವಾದ ನೀರು ಮಾತ್ರ ನಮಗೆ ದೊರೆಯುವುದು ಮಳೆಯನ್ನೇ ಅವಲಂಬಿಸಿದ್ದೇವೆ. ಭೂಮಿಯ ಮೇಲೆ ವಾಸಿಸುವ ಅನೇಕ ಜೀವಿಗಳು ಇದನ್ನೇ ಆಶ್ರಯಿಸಿದ್ದು ಮಳೆ ಇಲ್ಲದೆ ಅಥವಾ ಜಲವಿಲ್ಲದೆ ಅವು ಬದುಕಲಾರವು. ಹಾಗಾಗಿ ಜಲವೇ ಸಕಲ ಜೀವಗಳಿಗೆ ಜೀವನ ಮೂಲ ಎಂದು ಹೇಳಿದರೆ ತಪ್ಪಾಗಲಾರದು.

ಜೀವ ಜಲದ ನೈಸರ್ಗಿಕ ಮರು ಸೃಷ್ಟಿಯೇ ಮಳೆ ಅಥವಾ ವೃಷ್ಟಿ. ಈ ವೃಷ್ಟಿಯ ಕುರಿತಾದ ಆಳವಾದ ಜ್ಞಾನವೇ ವೃಷ್ಟಿಶಾಸ್ತ್ರ ಅಥವಾ ಜಲಶಾಸ್ತ್ರ. ಈ ಜಲ ಶಾಸ್ತ್ರವನ್ನು ಕುರಿತಾಗಿ ಜನಪದರಲ್ಲಿ ಸಾಕಷ್ಟು ಜ್ಞಾನ, ಅನುಭವವಿದೆಯಾದರೂ ಕನ್ನಡ ಗ್ರಂಥಸ್ಥ ಸಾಹಿತ್ಯದಲ್ಲಿ ಉಪಲಬ್ದವಾಗುವ ಏಕೈಕ ಗ್ರಂಥವೆಂದರೆ 'ರಟ್ಟಮತ.' ಈ ಗ್ರಂಥದ ಕರ್ತೃ 'ಅರ್ಹದ್ದಾಸ' ಎಂಬ ಜೈನ ಕವಿ. ಈತನಿಗೆ ರಟ್ಟಕವಿ, ರಟ್ಟುಗ ಎಂಬ ಬೇರೆ ಬೇರೆ ಹೆಸರುಗಳು ಇರುವುದಾಗಿ ತಿಳಿದು ಬರುತ್ತದೆ. ಈತನ ಕಾಲ ಕ್ರಿ.ಶ. 1300 ಎಂಬುದು ವಿದ್ವಾಂಸರ ಅಭಿಪ್ರಾಯ. ಈತ ಮಳೆ ಶಾಸ್ತ್ರವನ್ನು ಕುರಿತು ರಟ್ಟಮತ ಎಂಬ ಗ್ರಂಥವನ್ನು ಬರೆದಿದ್ದಾನೆ. ಈತ ಗಂಗದೊರೆ ಮಾರಸಿಂಹನ ಚಮೂಪತಿಯಾದ ಕಾಡಮರಸನ ವಂಶದಲ್ಲಿ ಹುಟ್ಟಿದವನು. ಜಿನನಗರಪತಿ, ಗಿರಿನಗರಾಧೀಶ್ವರ ಎಂದು ತನ್ನನ್ನು ತಾನು ಕರೆದುಕೊಂಡಿದ್ದಾನೆ. ಈತನ ತಂದೆ ನಾಗಕುಮಾರ. ರಟ್ಟ ಕವಿಯ ಮೂಲಪುರುಷ ಕಾಡಮರಸ. ಇವನು ತಲಕಾಡಿನ ಗಂಗರಾಜ ನರಸಿಂಹ ಎಂಬುವನಲ್ಲಿ ದಂಡ ನಾಯಕನಾಗಿದ್ದನು. ತನ್ನ ಪರಾಕ್ರಮದ ಫಲವಾಗಿ ಅರಸನಿಂದ 25 ಗ್ರಾಮಗಳನ್ನು ಮಾನ್ಯವಾಗಿ ಪಡೆದಿದ್ದನು. ಆದ್ದರಿಂದ ಈತನಿಗೆ ರಟ್ಟ, ರಟ್ಟವೆಡಂಗ, ರಟ್ಟುಗ, ರಟ್ಟಯ್ಯ, ರಟ್ಟಣ್ಣ ಎಂಬ ಹೆಸರುಗಳೂ ಅರ್ಹದ್ದಾಸನಿಗೆ ಇವೆ. ಉದಾರಚಿಂತಾಮಣಿ, "ಆಗಮಕೋವಿದಂ, ಸುಜನೈಕಬಾಂಧವ, ಅಭಿಮಾನನಿಧಿ, ಅಭಿಮಾನ ಜಲದಿವಿನಯಾಂಬುರಾಶಿ, ಕೀರ್ತಿ ರಮಣೀಯರಮಣಂ, ಕವಿಗಳಾಭರಣಂ, ನಯಬಂಧು, ಬಂಧುಮಿತ್ರ, ಕವಿಪಂಕಜಭವಂ, ಅಭಿಮಾನ ಜಲಧಿ, ವಿನಯಾಂಬುರಾಶಿ, ಕೀರ್ತಿರಮಣೀಯ ರಮಣಂ, ರಟ್ಟ ಕವೀಂದ್ರ, ಒಳ್ಪಿನ ಕಣಿ, ವಿಶಿಷ್ಟಪ್ರಿಯಂ, ಸಮ್ಯಕ್ತ್ವ ರತ್ನಾಕರಂ, ಅರ್ಹದ್ದಾಸಂ, (ಅರಿಹಂತನ ದಾಸ) ಜನಪದ ದಾಸಂ, ಅಭಿನವ ಗಾರ್ಗ್ಯ, ಜಿನ ನಗರ ಪತಿ, ಪ್ರಣುತ ಜಿನಭಕ್ತ, ರಟ್ಟಕವೀಂದ್ರ, ವಿಶಿಷ್ಟಪ್ರಿಯಂ, ಬಿನ್ನಣ ರಟ್ಟುಗಂ, ಸತ್ಯ ರತ್ನಾಕರಂ ಎಂಬ ಅನೇಕ ಬಿರುದುಗಳಿದ್ದವು."[3] ಎಂಬುದಾಗಿ ಅವನ ಕೃತಿಯಿಂದಲೇ ತಿಳಿದು ಬರುತ್ತದೆ.

ಕವಿಯ ಹುಟ್ಟೂರಿನ ಬಗೆಗೆ ಯಾವುದೇ ಮಾಹಿತಿಗಳು ಸ್ಪಷ್ಟವಾಗಿ ಲಭಿಸುವುದಿಲ್ಲವಾದರೂ ತಾನೇ ಹೇಳಿಕೊಂಡಿರುವ 'ಜಿನನಗರ ಪತಿ' ಎಂಬ ಬಿರುದನ್ನಾಧರಿಸಿ ಎಚ್. ಶೇಷಅಯ್ಯಂಗಾರ್ ಅವರು "ಈತನು ಜಿನನಗರ ಎಂಬ ಗ್ರಾಮದ ಒಡೆಯನಾಗಿದ್ದಿರಬೇಕು. ಅದೇ ಅವನ ಹುಟ್ಟೂರಾಗಿರಬಹುದು"[4] ಎಂದು ಊಹಿಸಿದ್ದಾರೆ. ಆದರೆ ಕವಿಯ ಹೆಸರಿನ ಜೊತೆಗೆ ರಕ್ತ ಎಂಬ ಪದ ತಳುಕು ಹಾಕಿಕೊಂಡಿದ್ದು ಇವನೊಬ್ಬ ರಾಜ ಮನೆತನದವನಾಗಿದ್ದ ಉದಾಹರಣೆಗಳು ದೊರೆಯುವುದರಿಂದ ಹಾಗೂ ಈತನ ಹೆಸರಿನಲ್ಲಿ ಪದೇಪದೇ ಸೌದತ್ತಿಯ ರಟ್ಟ ರಾಜಮನೆತನದ ಹೆಸರು ತಳಕು ಹಾಕಿಕೊಂಡಿರುವುದರಿಂದ ಸವದತ್ತಿಯ ರಟ್ಟ ರಾಜಮನೆತನಕ್ಕೆ ಅಥವಾ ರಾಜವಂಶಕ್ಕೆ ಸೇರಿದವನಾಗಿರಬೇಕು ಎಂದೆನಿಸುತ್ತದೆ. ಅತ್ಯಂತ ಗಮನಹರಿಸಬೇಕಾದ ಅಂಶವೇನೆಂದರೆ ಅರ್ಹದಾಸನ ಕೃತಿ ಆಧಾರಿತ ಪಂಚಾಂಗಗಳ ರಚನೆ ಸವದತ್ತಿಯ ಸುತ್ತಮುತ್ತ ಅಂದರೆ ಗದಗಿನಲ್ಲಿ ಇಂದಿಗೂ ಭಾರತೀಯ ಕಾಲಮಾನದ ಪಂಚಾಂಗಗಳು ಕ್ಯಾಲೆಂಡರ್‌ಗಳು ರಟ್ಟಮತ ಕೃತಿಯನ್ನಾಧರಿಸಿಯೇ ರಚನೆಯಾಗುವುದರಿಂದ ಬಹುಶಹ ಕವಿಯು ಸೌದತ್ತಿ, ಗದಗ ಸುತ್ತಮುತ್ತಲ ಪರಿಸರದವನೇ ಆಗಿರಬೇಕು ಎಂದೆನಿಸುತ್ತದೆ. ಸೌದತ್ತಿಯಲ್ಲಿ ಈ ಹಿಂದೆ ರಟ್ಟರು ಆಳುತ್ತಿದ್ದರಿಂದ ಅವರ ಆಶ್ರಯದಲ್ಲಿಯೇ ಅಥವಾ ಆ ಪರಿಸರದಲ್ಲಿಯೇ ಅರ್ಹದ್ದಾಸ ಬಾಳಿ ಬದುಕಿದ್ದಿರಬಹುದಾದ ಸೂಚನೆಗಳು ಕವಿಯ ಕೃತಿಯಿಂದಲೇ ದೊರೆಯುವುದರಿಂದ ಕವಿಯು ಸೌದತ್ತಿ ಅಥವಾ ಸೌಂದತ್ತಿ ಪರಿಸರದಲ್ಲಿರುವ ಜೈನ ಧಾರ್ಮಿಕ ಕೇಂದ್ರಗಳಾದ ಲಕ್ಕುಂಡಿ ಇಲ್ಲವೇ ಲಕ್ಷ್ಮೇಶ್ವರದಲ್ಲಿ ಬಾಳಿ ಬದುಕಿದವನಾಗಿರಬೇಕು ಎಂದೆನಿಸುತ್ತದೆ. ಅದೂ ಅಲ್ಲದೆ ಖ್ಯಾತ ಜ್ಯೋತಿಷ್ಯ ಶಾಸ್ತ್ರಜ್ಞ ಜಾತಕ ತಿಲಕ ಕೃತಿಯ ಕರ್ತೃ ಶ್ರೀಧರ ಆಚಾರ್ಯ ಕೂಡ ಸವದತ್ತಿಯವನೇ. ಹೀಗಾಗಿ ಅರ್ಹದ್ದಾಸನ ಮೇಲೆ ಶ್ರೀಧರಾಚಾರ್ಯನ ಜ್ಯೋತಿಷ್ಯ ಶಾಸ್ತ್ರದ ಪ್ರಭಾವ ಸಹಜವಾಗಿ ಆಗಿರಲೇಬೇಕು. ಅದೂ ಅಲ್ಲದೆ ಅರ್ಹದ್ದಾಸನ ರಟ್ಟ ಮತದಲ್ಲಿ ಬರುವ ಶಕುನ ನಂಬಿಕೆಗಳ ಕುರಿತಾದ ಅನೇಕ ವಿಷಯಗಳು ಇಂದಿಗೂ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಚಲಿತದಲ್ಲಿವೆ.

ರಟ್ಟಕವಿ ವಿರಚಿಸಿರುವ ರಟ್ಟಮತವು, ಜಲಶಾಸ್ತ್ರ ಅಥವಾ ಮಳೆಶಾಸ್ತ್ರವನ್ನು ಕುರಿತು ವಿವರಿಸುವುದರಿಂದ ಅದಕ್ಕೇ ರಟ್ಟಶಾಸ್ತ್ರ ಎಂಬ ಇನ್ನೊಂದು ಹೆಸರೂ ಇದೆ. ಗ್ರಂಥಕಾರನು ಕೆಲವೆಡೆ ಅಚ್ಚಿಸೂತ್ರ, ಮೇಘಾಡಂಬರ, ಮೇಘಮಾಲೆ ಎಂದೂ ಹೆಸರಿಸಿರುವನು. 1950ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಅಧ್ಯಾಪಕರಾಗಿದ್ದ ಹೆಚ್. ಶೇಷಅಯ್ಯಂಗಾರ್ ಅವರು ಮದ್ರಾಸ್ ಸರ್ಕಾರದ ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳನ್ನು ಆಧರಿಸಿ ಈ ಗ್ರಂಥವನ್ನು ಮೊದಲ ಬಾರಿಗೆ ಸಂಪಾದಿಸಿದರು. ಈ ಗ್ರಂಥದಲ್ಲಿ ವಿಶ್ಲೇಷಿತವಾಗಿರುವ ಮಳೆ ಬರುವುದು ಮತ್ತು ಬರದಿರುವ ವಿಚಾರವನ್ನು ತಿಳಿಸಿರುವುದನ್ನು ಅನುಸರಿಸಿ ಇದನ್ನು 'ಮಳೆಯ ಕುರುಹು' ಅಥವಾ 'ವೃಷ್ಟಿಶಾಸ್ತ್ರ' ಎಂದು ಕರೆಯುವುದು ವಾಡಿಕೆ ಎಂದು ಸಂಪಾದಕರು ಉಲ್ಲೇಖಿಸುತ್ತಾರೆ. ಅಲ್ಲದೇ 'ಮೇಘಾಡಂಬರ', 'ಮೇಘಮಾಲೆ' ಎಂದು ಹೆಸರಿಸಿರುವುದರಿಂದ 'ರಟ್ಟಮತ'ದ ರಚನೆಗೆ ಕವಿಯು ಸಂಸ್ಕೃತದ ಈ ಎರಡು ಗ್ರಂಥಗಳನ್ನು ಅನುಸರಿಸಿರಬಹುದು ಎಂದು ಸಂಪಾದಕರು ಊಹಿಸುತ್ತಾರೆ. 12 ಅಧ್ಯಾಯಗಳಲ್ಲಿರುವ 'ರಟ್ಟಮತ' ಕೃತಿಯಲ್ಲಿ ವೃತ್ತ, ಕಂದಪದ್ಯ, ತ್ರಿಪದಿ ರಗಳೆಗಳಿಂದೊಡಗೂಡಿದ ಒಟ್ಟು 900 ಪದ್ಯಗಳಿವೆ. 14 ನೆಯ ಶತಮಾನದಲ್ಲಿದ್ದ ಭಾಸ್ಕರನೆಂಬ ಆಂಧ್ರಕವಿಯು ಅರ್ಹದ್ದಾಸನ 'ರಟ್ಟಮತ'ವನ್ನು ತೆಲುಗಿಗೆ ಭಾಷಾಂತರ ಮಾಡಿದರೆ 18ನೆಯ ಶತಮಾನದ ಕರಿಬಸವಾರ್ಯವೆಂಬ ಕವಿ ಅರ್ಹದ್ದಾಸನ ರಟ್ಟಮತಕ್ಕೆ ಟೀಕೆಯನ್ನು ಬರೆದಿದ್ದಾನೆದ್ದಾನೆ.

**ಪ್ರಥಮಾಧ್ಯಾಯಂ : ಪೀಠಿಕಾ ಪ್ರಕರಣಂ**

ವಾಡಿಕೆಯಂತೆ ಅರ್ಹದ್ದಾಸನು ಕೃತಿಯ ಆರಂಭದಲ್ಲಿ ಜಿನಾರಾಧನೆಯನ್ನು ಮಾಡಿದ್ದಾನೆ. ಅದಾದ ಮೇಲೆ ಯಕ್ಷ–ಯಕ್ಷಿಯರ ಸ್ತುತಿಯನ್ನೂ, ಸರಸ್ವತೀ ಸ್ತುತಿಯನ್ನೂ ಮಾಡಿದ್ದಾನೆ. ನಂತರ ಸ್ವ–ವಿಚಾರವನ್ನು ತಿಳಿಸಿ ಕೃತಿಯನ್ನು ಆರಂಭಿಸುತ್ತಾನೆ.

"ಇಳೆಯೊಳ್ ಸ್ಥಾವರ ಜಂಗಮ
ಮಳೆಯಲ್ಲದೆ ಬೆರ್ಚುತಿರ್ಕುಮದುಕಾರಣದಿಂ
ಮಳೆಯನರಿವಂತೆ ಪೇಳುವೆಂ
ಮಳೆಯಂದವ ಪೊಸತುಮಾಡಿ ಕನ್ನಡದಿಂದಂ
ಅದರಿಂ ಧಾನ್ಯಚಯಂ ಬೆಳೆ

ದುದನಜವೊಡೆ ಮನೆಯ ನದುಪೇ
ಳ್ವುದುಮತ್ತಂತೊದಳಿಲ್ಲದೆ
ಪೇಳ್ವುದು ಕಲಿ ನೆಟ್ಟನೆ ಸೂತ್ರಕ್ರಮದಿಂ"[4]

ಭೂಮಿಯ ಮೇಲೆ ಮಳೆಯಿಲ್ಲದೇ ಸ್ಥಾವರ, ಜಂಗಮಗಳು ಇರಲಾರವು. ಈ ಶಾಸ್ತ್ರದ ಮುಖೇನ ಮಳೆಯ ಲಕ್ಷಣಗಳನ್ನು ಅರಿಯುವಂತೆ ಕನ್ನಡದಲ್ಲಿ ತಿಳಿಸುವುದಾಗಿ ಕವಿ ಹೇಳುತ್ತಾನೆ. ಮಳೆಯಿಂದಲೇ ಧಾನ್ಯಗಳು ಸಕಲ ಸಸ್ಯ ಸಂಪತ್ತು ಬೆಳೆಯುವವು. ಈ ಮಳೆ ಕುರಿತಾದ ವಿಷಯವನ್ನು ಸೂತ್ರಕ್ರಮದಲ್ಲಿ ಹೇಳುವುದಾಗಿ ತಿಳಿಸುತ್ತಾನೆ. ಅಂಡಜ, ಪಿಂಡಜ, ಉದ್ದಿಜ(ಶ್ವೇದಜ) ಮತ್ತು ಜರಾಯುಜಗಳೆಂಬ ನಾಲ್ಕು ತರಹದ ಜೀವೋತ್ಪತ್ತಿಗೆ ಭೂಮಿ, ನೀರು, ಸೂರ್ಯನ ಕಿರಣ ಹಾಗೂ ಗಾಳಿ ಮುಖ್ಯವಾಗಿಬೇಕು. ಸೂರ್ಯನ ಶಾಖದಿಂದ ಧರಣಿಯು ಬಾಯ್ಬಿಟ್ಟಾಗ ಅದನ್ನು ಮಳೆ ಸುರಿದು ತಂಪಾಗಿಸುವುದು ಅಥವಾ ಸಮವಾಗಿಸುವುದು. ಈ ವಿಚಾರಗಳನ್ನು ಗಾರ್ಗ್ಯಾಚಾರ್ಯರ ಮತದಿಂದ ಮೇಘಮಾಲೆಯ ಅನುನಯದಿಂದ ಹೇಳಿರುವುದಾಗಿ ತಿಳಿಸುತ್ತಾನೆ.

ಪರಿವೇಷ, ಮಳೆ, ಮಿಂಚು, ಗಾಳಿ, ಜಳದ, ಶೀತ, ಬಿಸಿಲು, ನೀರ್ಗದಿರು, ಶರದ, ಘರ್ಜನೆ ಎಂಬ ಹತ್ತು ನೈಮಿತ್ತಿಕ ಧಾತುಗಳಿಂದ ಮಳೆಯಾಗುವುದು ಎಂದಿದ್ದಾನೆ ಅರ್ಹದ್ದಾಸ. ಅರ್ಹದಾಸ ಮಳೆ ಸುರಿಯುವ ಮೊದಲು ಕಂಡುಬರುವ ಅನೇಕ ಮುನ್ಸೂಚಕ ಅಂಶಗಳನ್ನು ಸ್ವಾನುಭವದ ಮೂಲಕ ಅತ್ಯಂತ ಸ್ವಾರಸ್ಯಕರವಾಗಿ ವಿವರಿಸಿದ್ದಾನೆ. ದಿಟ್ಟ ಕೃಷಿ ಉಪಕರಣಗಳು ತುಕ್ಕು ಹಿಡಿಯುವುದು; ನಾಯಿಗಳು ಊಳಿಡುವುದು; ಉಪ್ಪು, ಬೆಲ್ಲದ ಪಾತ್ರೆಗಳು ಒಡೆಯುವುದು; ತಿಗಣೆ, ನೊಣಗಳು ಪಶುಗಳಿಗೆ ಮೆತ್ತಿಕೊಳ್ಳುವುದು; ಬಳ್ಳಿಗಳ ಚಿಗುರು ಮೇಲೆ ಮುಖಮಾಡುವುದು; ತಗ್ಗು ಪ್ರದೇಶದಲ್ಲಿ ನೀರೊಸರುವುದು; ಪಕ್ಷಿಗಳು ಮಣ್ಣಿನಲ್ಲಿ ಹೊರಳಾಡುವುದು; ಝರಿಗಳಲ್ಲಿ ನೀರು ಹೆಚ್ಚಾಗುವುದು; ಉಲ್ಕಾಪತನ: ಪಶ್ಚಿಮದಲ್ಲಿ ಕಾಮನಬಿಲ್ಲು ಮೂಡುವುದು; ಸುಂಟರಗಾಳಿ ಉಂಟಾಗುವುದು; ಕೊಡತಿಹುಳುಗಳು ಆಡುವುದು; ಕಾಗೆಗಳು ಮೊಟ್ಟೆಯಿಡುವುದು; ದೊಡ್ಡ ಮೋಡಗಳು ವಿಳುವುದು; ಮನುಷ್ಯರಿಗೆ ಅತಿಮೂತ್ರವಾಗುವುದು; ನವಿಲು ಕೂಗುವುದು; ಸಂಜೆಯ ಹೊತ್ತಿನಲ್ಲಿ ಮಂಜು ಬೀಳುವುದು ಹಾವು ಮರವನ್ನು ಏರುವುದು, ನದಿ ಸರೋವರ ಸಮುದ್ರದ ಮೀನುಗಳು ದಡದಕಡೆಗೆ ಬರುವುದು, ಪೂರ್ವಕ್ಕೆ ಕಾಮನಬಿಲ್ಲು ಮೂಡುವುದು; ನೀರಿನ ರುಚಿ ಕೆಡುವುದು; ಬೆಳಗು ಮತ್ತು ಸಂಜೆಯ ಹೊತ್ತಿನಲ್ಲಿ ಮಂಜು ಬೀಳುವುದು, ಮೃಗಪಕ್ಷಿಗಳು ವಿಚಿತ್ರವಾಗಿ ಕೂಗುವುದು; ಬೆಕ್ಕು, ಮೊಲ, ಹುಲಿ, ನರಿ ಮುಂತಾದ ಪಾಣಿಗಳು ಹರುಷದಿಂದ ಓಡಾಡುವುದು; ಇರುವೆಗಳು ಮೊಟ್ಟೆಗಳನ್ನು ಬೇರೆಡೆಗೆ ಸಾಗಿಸುವುದು. ನೀರು ಹಕ್ಕಿ, ಆನೆ ನೀರನ್ನು ಎರಚಾಡುವುದು ಕಪ್ಪೆಗಳು ಒಟಗುಟ್ಟುವುದು, ಇವೆಲ್ಲವೂ ಮಳೆಯಾಗುವ ಲಕ್ಷಣಗಳನ್ನು ಸೂಚಿಸುತ್ತವೆ ಎಂದಿದ್ದಾನೆ ಅರ್ಹದ್ದಾಸ.

'ರಟ್ಟಮತ'ದ ಮೂರನೆಯ ಅಧ್ಯಾಯದಲ್ಲಿ ಬಕಪಕ್ಷಿ, ಪೋದಗೆ ಹಕ್ಕಿ (ಪಾರಿವಾಳ) ಹಾಗೂ ನಾಯಿಗಳನ್ನು ಪೂಜಿಸುವುದು, ನಂತರ ಅವುಗಳಿಂದ ಸ್ವಲ್ಪ ದೂರದಲ್ಲಿ ಹೋಗಿ ಮರೆಯಲ್ಲಿ ನಿಂತು ಅವುಗಳ ಚಟುವಟಿಕೆಗಳನ್ನು ನಿರುಕಿಸಬೇಕು. ಅದನ್ನಾಧರಿಸಿ ಮಳೆ ಶಕುನಗಳನ್ನು ತಿಳಿಯಬಹುದು ಎಂದು ರಟ್ಟಕವಿಯು ತಿಳಿಸುತ್ತಾನೆ.

1. ಪಿಂಗಲಿಯ ಕೂಗತೊಡಗಿದರೆ; ಮೂತ್ರಮಾಡಿದರೆ; ಶಾಂತವಾಗಿ ನಿಂತರೆ; ದೇಹವನ್ನು ನಿಟ್ಟಿಸಿ ನಿಂತರೆ: ಭಯಗೊಂಡರೆ; ಹರ್ಷದಿಂದ ಕುಣಿದಾಡಿದರೆ; ನೀರಿನ ಮೂಲವನ್ನು ಹುಡುಕಿಕೊಂಡು ಹೋದರೆ ಮಳೆಯಾಗುವುದು.
2. ಮೋದಗೆಯ ಮರಿಗಳೊಂದಿಗೆ ಗೂಡಲ್ಲಿ ಸೇರಿದರೆ; ತನ್ನ ಮೊಟ್ಟೆಗಳನ್ನು ರಕ್ಷಣೆ ಮಾಡಲು ನೋಡಿದರೆ; ಮಲ, ಮೂತ್ರ ವಿಸರ್ಜಿಸಿದರೆ ಅತಿವೃಷ್ಟಿಯಾಗುವುದು. ಕಟ್ಟಿಗೆಯ ಮೇಲೆ ಮೂತ್ರ ಮಾಡಿದರೆ ಸಾಧಾರಣ ಮಳೆಯಾಗುವುದು. ಕಲ್ಲಿನ ಮೇಲೆ ಮೂತ್ರ ಮಾಡಿದರೆ ಆಲೆಕಲ್ಲುಮಳೆಯಾಗುವುದು. ಪದೇ ಪದೇ ರೆಕ್ಕೆಗಳನ್ನು ಬಡಿದರೆ; ನೀರಿನ ತಾಣಗಳನ್ನು ಹುಡುಕಿಕೊಂಡು ಹೋದರೆ; ಮಣ್ಣಲ್ಲಿ ಹೊರಳಾಡಿದರೆ ಮಳೆಯಾಗುವುದು.
3. ಶುನಕ ಶಕುನಂ: ನಾಯಿಯು ಮರಗಿಡಗಳ ಮಧ್ಯದಲ್ಲಿ ಹೋಗಿ ಊಳಿಟ್ಟರೆ; ಮುಗಿಲಿಗೆ ಮುಖಮಾಡಿ ಬೊಗಳಿದರೆ; ಪಶುಗಳ ಹಿಂದೆ ಹೋಗಿ ಬೊಗಳಿದರೆ; ನದಿದಡಕ್ಕೆ ಹೋಗಿ ಊಳಿಟ್ಟರೆ; ಶಾಂತವಾಗಿ ನಿಂತರೆ; ಗಾಳಿಗೆ ಇದಿರಾಗಿ ಬೊಗಳಿದರೆ; ಕೃಷಿ ಸಾಮಗ್ರಿಗಳ ಮೇಲೆ ಮೂತ್ರ ಮಾಡಿದರೆ; ಮರಗಿಡಗಳನ್ನು ಪದೇ ಪದೇ ಮೂಸಿ ನೋಡಿ ಮೂತ್ರ

ಮಾಡಿದರೆ ಉತ್ತಮವಾದ ಮಳೆಯಾಗುವುದು. ಅಳುತ್ತ, ಹೊರಳಾಡುತ್ತ ಮೈಮುರಿದುಕೊಂಡರೆ; ಚಿಂತೆಯಲ್ಲಿದ್ದರೆ; ಬೂದಿಯಲ್ಲಿ ಹೊರಳಾಡಿದರೆ; ಬಿಟ್ಟೂ ಬಿಡದೇ ನೀರನ್ನು ಕುಡಿದರೆ; ಮನೆಗಳಲ್ಲಿ ಹೊಕ್ಕರೆ; ಮಡುಗಳಲ್ಲಿ ಹೊಕ್ಕರೆ; ಬಿಡದೇ ಮೂತ್ರ ಮಾಡಿದರೆ; ಗೋಡೆಗಳಿಗೆ ಮೈ ಉಜ್ಜುಕೊಂಡರೆ ಮಳೆಯಾಗದು ಎಂದು ಹೇಳುತ್ತಾನೆ.

ಮುಂದುವರೆದು ಅರ್ಹದ್ದಾಸನು ಅಂತರ್ಜಲ ಮೂಲಗಳನ್ನು ಶೋಧಿಸುವ ಬಗೆಯನ್ನು 'ಉದಕಾರ್ಗಳಂ' ಎಂದು ಕರೆದು ಯಾವ ಯಾವ ಲಕ್ಷಣಗಳಿಂದ ನೆಲದಲ್ಲಿರುವ ನೀರಿನ ಮೂಲಗಳನ್ನು ಹೇಗೆ ಪತ್ತೆಹಚ್ಚಬಹುದು ಎಂಬುದನ್ನು ವಿವರಿಸಿದ್ದಾನೆ. 'ರಟ್ಟಮತ'ದ ಹನ್ನೊಂದನೆಯ ಅಧ್ಯಾಯದಲ್ಲಿ ರಟ್ಟಕವಿಯು ಮಳೆಯ ನೀರನ್ನು ಶೋಧಿಸುವ ಬಗೆಯನ್ನು ವಿವರವಾಗಿ ತಿಳಿಸಿದ್ದಾನೆ. ಈಗಲೂ ಉತ್ತರ ಕರ್ನಾಟಕ ಭಾಗದಲ್ಲಿ ರಟ್ಟಮತದ ಅಭಿಪ್ರಾಯದಂತೆ ಅನೇಕ ಜಾನಪದ ಜಲಶೋಧ ತಜ್ಞರು ನೀರನ್ನು ಅಂತರ್ಜಲವನ್ನು ಶೋಧಿಸುವಲ್ಲಿ ಯಶಸ್ವಿ ಆಗಿರುವುದನ್ನು ಕಾಣುತ್ತೇವೆ. ಯಾವ ಪ್ರದೇಶದಲ್ಲಿ ಬಾವಿಯನ್ನು ತೋಡಿದರೆ ನೀರು ಬರುವುದು; ಹುತ್ತ, ಮರಗಳು, ಹುಲ್ಲುಗಳು ಬೆಳೆದಿರುವುದನ್ನು ಆಧರಿಸಿ ನೀರಿನ ಇರುವಿಕೆಯನ್ನು ಗುರುತಿಸುವುದು; ಬಾವಿ ತೋಡುವ ಸಲಕರಣೆಗಳನ್ನು ತಯಾರಿಸುವ ಕ್ರಮ; ಬಾವಿಯಲ್ಲಿನ ನೀರು ಕೆಡದಂತೆ ವಹಿಸಬೇಕಾದ ಕ್ರಮಗಳನ್ನು ತಿಳಿಸಿದ್ದಾನೆ.

ಕುದುರೆಯ ಲಾಳಾಕೃತಿಯಲ್ಲಿ ಹುತ್ತವಿರುವ ಪ್ರದೇಶದ ಉತ್ತರಕ್ಕೆ ಮೂರಳತೆಯ ದೂರದಲ್ಲಿ; ಕಪ್ಪುಮಣ್ಣಿನಿಂದಾದ ಹುತ್ತದ ಪ್ರದೇಶದಲ್ಲಿ ಉತ್ತರ ದಿಕ್ಕಿಗೆ ನೀರಧಾರೆಯು ನಿಶ್ಚಿತವಾಗಿಯೂ ಇರುವುದು ಎಂದು ಹೇಳುತ್ತಾನೆ. ನೆಲವನ್ನು ಅಗೆಯುತ್ತಿರುವಾಗ ಆಳದಲ್ಲಿ ಕಪ್ಪೆಗಳಿದ್ದರೆ ನಾಲ್ಕು ಆಳಳತೆಯಲ್ಲಿ ನೀರಿರುವುದು. ಕಪ್ಪೆಯು ಕರಿಕಲ್ಲಿನ ಕೆಳಗಿದ್ದರೆ ಅಲ್ಲಿ ಅತಿ ಹೆಚ್ಚಿನ ನೀರು ಇರುವುದು. ತಾರೆಯ ಮರ, ತಿಲಕದ ಮರ, ಚೆಳ್ಳೆಯ ಮರ, ಎಕ್ಕದ ಗಿಡ, ತೆಂಗು, ತಾಳೆಗಳನ್ನು ಬಳಸಿ ಹುತ್ತವು ಬೆಳದಿದ್ದರೆ ಅಲ್ಲಿ ಉತ್ತಮವಾದ ಅಂತರ್ಜಲವಿರುವುದು. ಮುತ್ತುಗ, ಗದರಿ, ಕಥೆಯ ಮರಗಳ ಉತ್ತರ ದಿಕ್ಕಿಗೆ ಹುತ್ತವಿದ್ದರೆ ನೀರು ಬರುವುದು, ಆಲ, ಗೋಣಿ, ಪಾದರಿ, ಹುಲಿಗಿಲ, ತಿಗುಡೆ, ಅಶೋಕ, ತೇಗ, ಲೊಕ್ಕ, ಸಿರೀಸ, ಬಿಲ್ವ, ಬೀಟೆಮರಗಳು ಇರುವೆಡೆಯಲ್ಲಿ ಅಂತರ್ಜಲವು ಹೇರಳವಾಗಿರುವುದು ಎಂದಿದ್ದಾನೆ ಅರ್ಹದ್ದಾಸ.

ಹೀಗೆ ರಟ್ಟಕವಿಯು ರಟ್ಟಶಾಸ್ತ್ರ ಅಥವಾ ರಟ್ಟಮತದ 12 ಅಧ್ಯಾಯಗಳಲ್ಲಿ ವಿವಿಧ ಬಗೆಯಲ್ಲಿ ಮಳೆ ಮೋಡಗಳು ರಚನೆಯಾಗುವ ಬಗೆ, ಮಳೆ ಸುರಿಯುವ ಬಗೆ, ಪ್ರಾಣಿ-ಪಕ್ಷಿಗಳ ಶಕುನ ಫಲದಿಂದ ಆಗುವ ಮಳೆಯ ಲಕ್ಷಣಗಳು, ಮಳೆಯಾಗಬಹುದಾದ ಸಂದರ್ಭಗಳು, ಪ್ರಾದೇಶಿಕವಾಗಿ ಬಿತ್ತನೆ ಮಾಡಬೇಕಾದ ಕಾಲ, ಗ್ರಹ, ನಕ್ಷತ್ರ, ರಾಶಿಗಳ ಮೂಲಕ ಮಳೆಯ ಫಲಗಳು, ಪ್ರಕೃತಿಯಲ್ಲಿ ಆಗುವ ಬದಲಾವಣೆಗಳಿಂದ ಮಳೆಯ ಭಾವ ಇವುಗಳನ್ನು ಚೆನ್ನಾಗಿ ನಿರೂಪಿಸಿದ್ದಾನೆ. ಇಂದಿನ ಆಧುನಿಕ ಯುಗದ ಹವಾಮಾನ ತಜ್ಞರು, ಹಾಗೂ ಭೂಗೋಳ ಶಾಸ್ತ್ರಜ್ಞರು ಮೆಚ್ಚುವಂತೆ ಅರ್ಹದ್ದಾಸನು ರಟ್ಟಶಾಸ್ತ್ರದಲ್ಲಿ ತಿಳಿಸಿರುವ ಹಲವಾರು ವಿಷಯಗಳು ಅತ್ಯಂತ ವಿಶೇಷ ಹಾಗೂ ಅನ್ವಯಾತ್ಮಕ ವೈಜ್ಞಾನಿಕವಾಗಿ ಅಧ್ಯಯನ ಯೋಗ್ಯವಾದವುಗಳಾಗಿವೆ ಎಂಬುದು ಗಮನಾರ್ಹ ಸಂಗತಿ.

**ಕೊನೆಯ ಟಿಪ್ಪಣಿ:**

1. ಎಚ್. ಶೇಷ ಅಯ್ಯಂಗಾರ್ (ಸಂ): ರಟ್ಟಮತಂ, ಪುಟ-11
2. ಅದೇ, ಪುಟ-11
3. ಅದೇ, ಪುಟ-11
4. ಅದೇ, ಪುಟ-04-05